**ಬಿ.ಎ./ಬಿ.ಎಸ್‌ಡಬ್ಲ್ಯೂ ನಾಲ್ಕನೆಯ ಸೆಮಿಸ್ಟರ್ ಸಾಮಾನ್ಯ ಕನ್ನಡ (ಬೇಸಿಕ್)**

# ಪತ್ರಿಕೆ 4– ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯ

**ಒಟ್ಟು ಅಂಕಗಳು : 100**
**ಆಂತರಿಕ ಪರೀಕ್ಷೆ : 30**
**ಸೆಮಿಸ್ಟರ್ ಅಂತ್ಯ ಪರೀಕ್ಷೆ: 70**
**ಭೋದನೆ: 04 ಗಂಟೆಗಳು/ವಾರಕ್ಕೆ**
**ಘಟಕಗಳು : 04**

**ಅ) ರನ್ನ– ಸಾಹಸಭೀಮ ವಿಜಯಂ(ಗದಾಯುದ್ದ) (ಸಂಗ್ರಹ)–ತೀ.ನಂ.ಶ್ರೀ.**

ಗದಾಯುದ್ದ ಸಂಗ್ರಹ _ತೀ.ನಂ.ಶ್ರಿ – ಕಾವ್ಯಾಲಯ.ಮೈಸೂರು

ಅಧ್ಯಯನಕ್ಕೆ ಆಯ್ಕೆ ಮಾಡಿದ ಕಾವ್ಯಾಭಾಗ :–

1 ಆವತರಗಿಕೆ

2 ಬೀಮಸೇನಾ ಪ್ರತಿಜ್ಞೆ 118ಪದ್ಯಗಳು

3 ಸಂಜಯ ವಚನಂ

4 ದೃತರಾಷ್ಟ್ರ ವಚನಂ

**ಆ) ಅಲಕ್ಷಿತ ವಚನಗಾರ್ತಿಯರು**

(ಲೇಖಕರ ಪರಿಚಯ ಅಲಕ್ಷಿತ ಮೂಲವಸ್ತುವಿಗೆ ಚ್ಯುತಿಬಾರದಂತೆ ವಚನಕಾರ್ತಿಯರ ಆಯ್ದ ವಚನಗಳು–ಅಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಸತ್ಯಕ್ಕ, ಸೂಳೆ ಸಂಕವ್ವೆ,ಗೊಗ್ಗವ್ವೆ ,ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ, ಕಾಳವ್ವೆ, ಮುಕ್ತಾಯಕ್ಕ.)

**1) ಅಮುಗೆ ರಾಮಯ್ಯ ವಚನಗಳು: 5**

1. ಅನುಭಾವಿಗೆ ಅಂಗಶೃಂಗಾರವುಂಟೇ?
ಅನುಭಾವಿಗೆ ಕಾಮಕ್ರೋಧವುಂಟೇ?
ಅನುಭಾವಿಗೆ ನಾಹಂ ಕೋಹಂ ಸೋಹಂ ಎಂಬ ಭ್ರಾಂತಿನ ಭ್ರಮೆಯುಂಟ
ಅನುಭಾವಿಗೆ ನನ್ನವರು ತನ್ನವರೆಂಬ

ಗನ್ನಗದಕಿನ ಮಾತುಂತೆ?
ಅನುಭಾವಿಗಳೆಂಬವರು ಅಲ್ಲಿಗಲ್ಲಿಗೆ
ತಮ್ಮ ಅನುಭಾವಂಗಳ ಬೀರುವರೆ?
ಅನುಭಾವಿಗಳ ಪರಿಯ ಹೇಳಿಹೆಕೇಳಿರಣ್ಣಾ:
ನೀರಮೇಲಣ ತೆಪ್ಪದಂತೆ, ಸಮುದ್ರದೊಳಗಣ ಬೆಂಗುಡಿನಂತೆ
ಇರಬಲ್ಲಡೆ ಅನಿಭಾವಿಗಳೆಂಬನಯ್ಯ
ವಚನಂಗಳ ಓದಿ ವಚನಂಗಳ ಕೇಳಿ
ಕಂಡ ಕಂಡ ಠಾವಿನಲಿ ಬಂಡುಗೆಲುವ ಜಗಭಂಡರ,
ಆತ್ಮತೇಜಕ್ಕೆ ತಿರುಗುವ ವೇಷದಾರಿಗಳ ಕಂಡು
ಅನುಭಾವಿಗಳೆಂದಡೆ
ಅಘೋರನರಕ ತಪ್ಪದು ಕಾಣಾ, ಅಮುಗೇಶ್ವರಾ.

2. ಆಸೆಯುಳ್ಳವಂಗೆ ಮಾಟಕೂವಲ್ಲದೆ,
ನಿರಾಸೆಯುಳ್ಳವಂಗೆ ಮಾಟಕೂಟವೇಕೇ?
ಮನ ಪರಿಣಾಮಿಗೆ ಮತ್ಸರವೇಕೆ?
ಸುತ್ತಿದ ಮಾಯಾ ಪ್ರಪಂಚದ ಜರಿದವಂಗೆ
ಅಂಗನೇಶ್ವರ ಹಿಂದು ಮುಂದು ತಿರುಗಲೇಕೆ?
ಅಮುಗೆಶ್ವರನೆಂಬ ಲಿಂಗವನರಿದವಂಗೆ
ಅಷ್ಟವಿಧಾರ್ಚನೆ ಷೋಡಶೋಪಚಾರದ ಹಂಗೇಕೆ?

3. ಒಡೆಯರ ಕಂಡಡೆ ಬಡಿವುದಯ್ಯಾ ಬಾಲವನು ಸುನಿ
ಕೊಡುವ ಕೊಂಬುವರ ಕೂಂಡು ಅವರಡಿಗೆರುಗುವರಯ್ಯಾ
ಮೃಡನ ವೇಷವ ತೊಟ್ಟು
ಕುರಿಗಳಂತೆ ತಿರುಗುವ ಜಡ ಜೀವಿಗಳ ಕಂಡಡೆ,
ಮೇಡನ ಶರಣರು ಮೋರೆಯನೆತ್ತಿ ನೋಡರು
ಕಾಣಾ ಅಮುಗೆಶ್ವರಾ

4. ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ?
ಆಡಿನ ಮರಿ ಆನೆಯಾಗಬಲ್ಲುದೆ?
ಸೀಳನಾಯಿ ಸಿಂಹದ ಮರಿಯಾಗಬಲ್ಲುದೆ?
ಅರಿವು ಆಚಾರ ಸಮ್ಯಜ್ಞಾನವನರಿಯದೆ
ನಾಮವ ಗೊತ್ತು ಕೊಂಡು ತಿರುಗುವ
ಗಾವಿಲರ ಮುಖವ ನೋಡಲಾಗದು ಅಮುಗೇಶ್ವರಾ

5. ಕುಂಜರನ ಮರಿಯ ಸರಪಳಿಯಲ್ಲಿ ಕಟ್ಟುವರಲ್ಲದೆ,
ಹಂದಿಯ ಮರಿಯ ಸರಪಳಿಯಲ್ಲಿ ಕಟ್ಟುವರೆ ಅಯ್ಯಾ?
ಸಿಂಹದ ಮರಿಯ ಕಂಡಡೆ ಸೋಜಿಗ ಬಡುವರಲ್ಲದೆ,
ಸಿಂಗಳೀಕನ ಮರಿಯ ಕಂಡಡೆ ಸೋಜಿಗ ಬಡುವರೆ ಅಯ್ಯಾ?
ಕಸ್ತೂರಿಯ ಮೃಗವ ಕಂಡಡೆ ಆಶ್ವರ್ಯಗೊಂಬರಲ್ಲದೆ
ಕತ್ತೆಯ ಮರಿಯ ಕಂಡಡೆ ಕಣ್ಣಿನಲ್ಲಿ ನೋಡಾ
ಲಿಂಗವನಪ್ಪಿ ಅಗಲದಿಪ್ಪ ಲಿಂಗೈಕ್ಯನ ಕಂಡಡೆ
ಜಗವೆಲ್ಲಾ ಕೊಂಡಾಡುತಿಪಗಪರು ನೋಡಾ
ಅಮುಗೇಶ್ವರನೆಂಬ ಲಿಂಗವನರಿಯದ ಅಜ್ಞಾನಿಗಳ ಕಂಡಡೆ
ಕತ್ತೆಯ ಮರಿಯೆಂದು ಕಣ್ಣು ಮುಚ್ಚಿ ಕೊಂಡಿಪ್ಪರು ನೋಡಾ

## 2) ಆಯ್ದಕ್ಕಿ ಲಕ್ಕಮ್ಮನ ವಚನಗಳು: 5

1. ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?
ಬೆಟ್ಟ ಬಲ್ಲಿತ್ತೆಂದಡೆ, ಉಳಿಯ ಮೊನೆಯಲ್ಲಿ
ಬಡತನವಿದ್ದಂತೆ ಒಡೆಯದೆ?
ಘನಶಿವಭಕ್ತರಿಗೆ ಬಡತನವಿಲ್ಲ
ಸತ್ಯರಿಗೆ ದುಷ್ಕರ್ಮವಿಲ್ಲ
ಎನಗೆ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವುಳ್ಳನ್ನಕ್ಕ ಅರ
ಹಂಗಿಲ್ಲ ಮಾರಯ್ಯ.

2. ಆಸೆಯೆಂಬುದ ಅರಸಿಂಗಲ್ಲದೆ,
ಶಿವಭಕ್ತರಿಗುಂಟೆ ಅಯ್ಯಾ
ರೋಷವೆಂಬುದು ಯಮದೂತರಿಗಲ್ಲದೆ,
ಅಜಾತರಿಗುಂಟೆ ಅಯ್ಯಾ
ಈಸಕ್ಕಿಯಾಸೆ ನೀಮಗೇಕೆ? ಈಶ್ವರನೊಪ್ಪ
ಮಾರಯ್ಯಾ ಪ್ರಿಯ ಅಮರೇಶ್ವರಲಿಂಗಕ್ಕೆ
ದೂರ ಮಾರಯ್ಯಾ.

3. ಕೈದ ಕೊಡುವರಲ್ಲದೆ
ಕಲಿತನವ ಕೊಡುವರುಂಟೆ ಮಾರಯ್ಯಾ?
ಹೆಣ್ಣ ಕೊಡುವರಲ್ಲದೆ
ಕೊಟಕ್ಕೊಳಗಾದವರುಂಡೆ ಮಾರಯ್ಯಾ?
ಮನದನೊರೆದು ಭಕ್ತಿಯ ನೋಡಿಹೆನೆಂಬವಂಗೆ
ಎಮ್ಮಲ್ಲಿ ಗುಣವ ಸಂಪಾದಿಸಲಿಲ್ಲ ಮಾರಯ್ಯಾ?
ಶೂಲವನೇರಿ ಸಂದಲ್ಲಿ ಮತ್ತಿನ್ನು
ಸಾವಿಂಗೆ ಹಂಗುಪಡಲೇಕೆ?
ಮಾರಯ್ಯಾ ಪ್ರಿಯ ಅಮರೇಶ್ವರಲಿಂಗಾ ನೀನೆ ಬಲ್ಲೆ.

4. ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು;
ನಡೆಯಿಲ್ಲದ ನುಡಿ ಅರಿವಿಗೆ ಹಾನಿ;
ಕೂಡದೆ ತ್ಯಾಗಿ ಎನಿಸಿಕೊಂಬುದು
ಮುಡಿಯಿಲ್ಲದ ಶೃಂಗಾರ.
ದೃಡವಿಲ್ಲದ ಭಕ್ತಿ ಅಡಿ ಒಡೆದ ಕಂಭದಲ್ಲಿ
ಸುಜಲವ ತುಂಬಿದಂತೆ,
ಮಾರಯ್ಯಾ ಪ್ರಿಯ ಅಮರೇಶ್ವರ ಲಿಂಗವ ಮುಟ್ಟದ ಭಕ್ತಿ.

5. ಸಸಿಗೆ ನೀರೆರೆದಡೆ ಬಳಕುವುದಲ್ಲದೆ,
ನಷ್ಟಮೂಲಕ್ಕೆ ಹೊತ್ತು ನೀರ ಹೊಯಿದೊಡೆ
ಎಳಕುವುದೆ ಮಾರಯ್ಯಾ?
ನಿನ್ನ ವಿರಕ್ತಿ ನಷ್ಟವಾಗದೆ ಮುನ್ನವೆ
ಮಾರಯ್ಯ ಪ್ರಿಯ
ಅಮರೇಶ್ವರ ಲಿಂಗವನರಿಯಿರಯ್ಯ.

## 3) ಕಾಳವ್ವೆಯ ವಚನಗಳು : 3

1. ಕುರಿ ಕೋಳಿ ಕಿರಿಮೀನು ತಿಂಬವರಿಗೆಲ್ಲ
ಕಲಜ ಕುಲಜರೆಂದೆಂಬರು
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ
ಮಾದಿಗ ಕೀಳು ಜಾತಿಯೆಂಬರು.
ಅವರೆಂತು ಕೀಳುಜಾತಿಯಾದರು?
ಜಾತಿಗಳು ನೀವೇಕೆ ಕೀಳಾಗಿರೊ?
ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಯಿತು.
ಅದೆಂತೆಂದಡೆ:
ಸಿದ್ಧಲಿಕೆಯಾಯಿತು, ಸಗ್ಗಳೆಯಾಯಿತು.
ಸಿದ್ಧಲಿಕೆಯಾಯಿತು, ಸಗ್ಗಳೆಯಾಯಿತು.
ಸಿದ್ಧಲಿಕೆಯ ತುಪ್ಪವನು, ಸಗ್ಗಳೆಯ ನೀರನು
ಶುದ್ಧವೆಂದು ಕುಡಿವ ಬುದ್ಧಿಗೇಡಿ ವಿಪ್ರರಿಗೆ
ನಾಯಕನರಕ ತಪ್ಪದಯ್ಯಾ
ಉರಿಲಿಂಗಪೆದ್ದಿಗಳರಸ ಬಲ್ಲನವ್ವಾ

2. ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ?
ಹುಸಿದು ತಂದು ಮಾಡುವಾತ ಭಕ್ತನೆ?
ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ?
'ನಿಂದಯಾ ಶಿವಭಕ್ತಾನಾಂ ಕೋಟಿ ಜನ್ಮನಿ ಸೂಕರ: ।
ಸಪ್ತ ಜನ್ಮನಿ ಭವೇತ್ ಕುಷ್ಠೀ ದಾಸಿಗರ್ಭೇಷು ಕಾಯತೇ॥'
ಎಂದುದಾಗಿ.
ತನ್ನ ಪ್ರಾಣದ ಮೇಲೆ ಬಂದಡೂ ಬರಲಿ, ಇವರ ಬಿಡಬೇಕು.
ಬಿಡದಿರಲು ಉರಲಿಂಗಪೆದ್ದಿಗಳರಸನೊಲ್ಲನವ್ವಾ

3. ವ್ರತವೆಂಬುದು ನಾಯಕರತ್ನ;
ವ್ರತವೆಂಬುದು ಸುಪ್ಪಾಣಿಯ ಮುತ್ತು.
ವ್ರತವೆಂಬುದು ಜೀವನ ಕಳೆ.
ವ್ರತವೆಂಬುದು ಸುಯಿದಾನ.
ವ್ರತ ತಪ್ಪಲು, ಉರಿಲಿಂಗಪೆದ್ದಿಗಳರಸನೊಲ್ಲನವ್ವಾ.

## 4) ಸತ್ಯಕ್ಕನ ವಚನಗಳು : 5

**1**. ಅರ್ಚನೆಪೂಜೆ ನೇಮವಲ್ಲ; ಮಂತ್ರ ತಂತ್ರ ನೇಮವಲ್ಲ;
ಧೂಪ ದೀಪಾರತಿ ನೇಮವಲ್ಲ;
ಪರಧನ ಪರಸ್ತ್ರೀ ಪರದೈವಂಗಳಿಗೆರದಿಪ್ಪುದೆ ನೇಮ.
ಶಂಭುಜಕ್ಕೇಶ್ವರನಲ್ಲಿ ನಾವು ಕಾಣಿರಣ್ಣಾ ನಿತ್ಯನೇಮ.

2. ಭಾವನೇಕೆ ಬಾರನೆನ್ನ ಮನೆಗೆ?
ಹರಿಯ ಮಗನನುರುಹಿದ ಗರುವದ
ಭಾವನೇಕೆ ಬಾರನೆನ್ನ ಮನೆಗೆ?
ಅಸುರರ ಪುರವ ಸುಟ್ಟ ವೀರ
ಭಾವನೇಕೆ ಬಾರನೆನ್ನ ಮನೆಗೆ?
ದಕ್ಷನ ಶಿರವನರಿದು, ಯಾಗವ ಕೆಡಿಸಿ ಕುರಿದೆಲೆಯ ಹತ್ತಿಸಿ
ಬಿನ್ನಾಣದ ಬಲುಹ ಮೆರೆವ
ಏಕೋ ಭಾವನೇಕೆ ಬಾರನೆನ್ನ ಮನೆಗೆ?
ಹರಿಯ ನಯನದ ಪೂಜೆ ಚರಣದಲೊಪ್ಪಿತ್ತೆಂಬ
ದುರುಳ ತನವು ತನಗೆ ಬೇಡವ್ವಾ
ಆತನ ಕರೆದು ತಾರವ್ವಾ, ಶಂಭುಜಕ್ಕೇಶ್ವರನ
ನೆರೆದು ನೋಡುವೆನು.

3. ಮಾಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ.
ಕಾಸಮೀಸೆ ಕಾಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ.
ಅದು ಜಗದ ಹಾಗೆ; ಬಲ್ಲವರ ನೀತಿಯಲ್ಲ.
ಏತರ ಹಣ್ಣಾದಡೂ ಮಧುರವೇ ಕಾರಣ
ಅಂದವಿಲ್ಲದ ಕುಸುಮಕ್ಕೆ ವಾಸನೆಯೆ ಕಾರಣ.
ಇದರಂದವ ನೀನೆ ಬಲ್ಲೆ ಶಂಭುಜಕ್ಕೇಶ್ವರಾ.

4. ಲಂಚವನಕ್ಕೆ ಕೈಯಾನದ ಭಾಷೆ, ಬಟ್ಟೆಯಲ್ಲಿ ಹೊನ್ನು ವಸ್ತ್ರ
ಬಿದ್ದಿದ್ದರೆ
ನಾನು ಕೈ ಮುಟ್ಟಿ ಎತ್ತಿದೆನಾದರೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ
ಅದೇನು ಕಾರಣವೆಂದರೆ, ನೀವಿಕ್ಕಿದ ಬಿಕ್ಷದೆಲ್ಲಿಪ್ಪನಾಗಿ
ಇಂತಲ್ಲದೆ ನಾನು ಅಳಿಮನದ ಮಾಡಿ ಪರದ್ರವ್ಯಕ್ಕೆ ಆಸೆ
ಮಾಡಿದೆನಾದರೆ
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ.

5. ಹೊರಗಿದ್ದಹನೆಂದು ನಾನು ಮರೆದು ಮಾತನಾಡಿದೆ:
ಅರಿಯಲೀಯದೆ ಬಂದನ್ನ ಅಂತರಂಗದಲ್ಲಿಪ್ಪನು
ತೆರೆಹಿಲ್ಲದಭವ ನುಡಿಗೆಡೆಗೂಡನು;
ಆತನ ಬಯಲಿಂಗೆ ಬೇಟಗೊಂಡೆ ನವ್ವಾ,
ನಾನೇನ ಮಾಡುವನೆಲೆ ತಾಯೆ,
ಮರದಡೆ ಎಚ್ಚರಿಸುವ ಕುರುಹಿಲ್ಲದ ಗಂಡನು
ತನ್ನನರಿದಡೆ ಒಳ್ಳಿದನವ್ವಾ ನಮ್ಮ ಶಂಭುಜಕ್ಕೇಶ್ವರನು.

## 5) ಗೊಗ್ಗವ್ವೆಯ ವಚನಗಳು : 3

**1.** ಗಂಡು ಮೋಹಿಸಿ ಹೆಣ್ಣ ಹಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡ ಹಡಿದಡೆ
ಉತ್ತರವಾವುದೆಂದರಿಯಬೇಕು?
ಈ ಎರಡರ ಉಭಯವ ಕಳೆದು ಸುಖಿ ತಾನಾಗವಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ

2. ಮಾರುತನಲ್ಲಿ ಬೆರೆದ ಗಂಧದಂತೆ
ಸುರತದಲ್ಲಿ ಬೆರೆದ ಸುಖದಂತೆ
ಮಚ್ಚಿದಲ್ಲಿ ಕೊಡುವ ಉಚಿತದಂತೆ
ಭಕ್ತರಿಗದೆ ಹಾದಿ ಎಂದೆ ನಾಸ್ತಿನಾಥಾ

3. ಮೊಲೆ ಮೂಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೊ ಗಂಡೊ ನಾಸ್ತಿನಾಥಾ?

## 6) ಮುಕ್ತಾಯಕ್ಕನ ವಚನಗಳು : 6

**1.** ಅಂಧಕನ ಕೈಯ ಅಂಧಕ ಹಿಡಿದಂತಿರಬೇಕು
ಮೂಗನ ಕೈಯಲ್ಲಿ ಕಾವ್ಯವ ಕೇಳಿದಂತಿರಬೇಕು
ದರ್ಪಣದೊಳಗಣ ಪ್ರತಿಬಿಂಬತೆ
ಹಿಡಿವರಿಗಳವಲ್ಲದಿರಬೇಕು ಅಣ್ಣಾ
ಕೂರ್ಮನ ಶಿಶುವಿನ ಸ್ನೇಹದಂತೆ. ಇರಲ್ಲೊಲ್ಲದೆ.
ಆರೂಡಗಟ್ಟಿಯೋ ಅಜಗಣ್ಣ ॥ 1 ॥

2. ಅಂಬರದಲಾಡುವ ತುಂಬಿಯ ಬಿಂಬಿದ
ಕಂಬನಿಯೊಳಗನ ರತ್ನದ
ನಯಕೆಯ್ಯಾದ್ಯಂತವನೇನೆಂಬೆನಯ್ಯಾ?
ವೇದ ಶಾಸ್ತ್ರ ಶೃತಿ ಸ್ಮೃತಿಗಳು ಸ್ತುತಿಸಲರಿಯವು
ನಾದವಲ್ಲ ಸುನಾದರ ನಿಲವಲ್ಲ
ಬೇಧಿಸುವಡೆ ಅಗಮ್ಯ ನೋಡಾ
ಸೋಲಿಲ್ಲದ ಸೊಮ್ಮಿಲ್ಲದ ಘನವನೇನೆಂಬೆನು?
ಎಂತು ಮರೆವೆನಯ್ಯಾ ಎನ್ನ ಅಜಗಣ್ಣ ತಂದೇಯನು? ॥ 2 ॥

3. ಆರೂ ಇಲ್ಲದವಳೆಂದೂ ಆಳಿಗೊಳಲುಬೇಡ
ಆಳಿಗೊಂಡಡೆ ಆನು ಅಂಜುವಳಲ್ಲ
ಒಲವಿನ ಒತ್ತೆಕಲ್ಲನು ಬೆವರಿಸಭಲ್ಲೆ ಕಾಣಿರೋ
ಅಪ್ಪಿದವರನಪ್ಪಿದಡೆ ತರಗೆತಿಯಂತೆ
ರಸವನರಸಿದಡುಂಟೆ ಅಜಗಣ್ಣ ತಂದೆ?

4. ಉಟ್ಟುದ ತೊರದವಂಗೆ ಊರೇನು ಕಾಡೇನು?
ನಷ್ಟ ಸಂತಾನಕ್ಕೆ ಕುಲವೇನು ಛಲವೇನು
ಹುಟ್ಟುಗೆಟ್ಟಾತಂಗೆ ಪುಣ್ಯವೇನು ಪಾಪವೇನು
ಅದು ಕೆಟ್ಟದು ಕೆಟ್ಟದು, ನಿನ್ನ ನೀ ನರಿಯದೆ
ಬಟ್ಟಬಯಲಲ್ಲಿ ಬಿದ್ದೆಯಲ್ಲಾ ಅಜಗಣ್ಣತಂದೆ.

5. ಜಲದ ಬೆತ್ತಾರದ ಕೊರಳಿನಲ್ಲಿ
ದಾರವಿಲ್ಲದ ಮುತ್ತಿನ ಸರವು ನೋಡಾ
ಚಿತ್ತಾರವಳಿಯದೆ, ಮುತ್ತು ಉಳಿಯದೆ
ನಿಂದ ನಿಲುವಿನ ಪರಿಯ ನೋಡಾ
ಗಮನವಿಲ್ಲದ ಗಂಭೀರ ಶುಭುದವಿಲ್ಲದ ಸಾರಾಯ
ಸಮತೆಯಾಗಿ ನಿಂದ ಅಜಗಣ್ಣಣಗೆ
ಇನ್ನಾರು ಸರಿ ಎಂಬೇನು.

6. ತನ್ನ ತಾನವರಿದವಂಗೆ ಅರಿವೆ ಗುರು
ಅರಿವರತು ಮರುಹು ನಷ್ಟವಾದಲ್ಲಿ ದೃಷ್ಟನಷ್ಟವೆ ಗುರು
ದೃಷ್ಟನಷ್ಟವೆ ಗುರು ತಾನಾದಲ್ಲಿ ಮುಟ್ಟಿ ತೋರಿದವರಿಲ್ಲದಡೇನು
ಸಹಜವ ನೆಲೆಗೊಳಿಸುವ ನಿರ್ಣಯ ನಿಷ್ಪತಿಯ ಗುರು ನೋಡಾ
ಗುರು ತಾನಾಡಡೂ ಗುರುವಿತಿರಬೇಕು ಎನ್ನ ಅಜಗಣ್ಣನಂತೆ

## 7) ಸೊಳೆ ಸಂಕವ್ವನ ವಚನಗಳು: 1

1. ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೇ

## 8) ಬೊಂತಾದೇವಿಯ ವಚನಗಳು :3

1. ಅರಿವೆ ಬಿಡಾಡಿ, ಅರಿಯದೆ ಬಿಡಾಡಿ
ಮರವೆ ಬಿಡಾಡಿ, ಮರೆಯದೆ ಬಿಡಾಡಿ,
ಅರಿವರಿತು ಕುರುಹಿಲ್ಲದಾತ ನೀನೇ ಬಿಡಾಡಿ॥

2. ಊರ ಒಳಗಣ ಬಯಲು,
ಊರ ಹೊರಗಣ ಬಯಲೆಂದುಂಟೆ?
ಊರೋಳಗೆ ಬ್ರಾಹ್ಮಣ ಬಯಲು,
ಊರ ಹೊರಗೆ ಹೊಲೆಬಯಲೆಂದುಂಟೆ?
ಎಲ್ಲಿ ನೋಡಿದಡೆ ಬಯಲೊಂದೆ;
ಭಿತ್ತಿಯಿಂದ ಒಳಹೊರಗೆಂಬ ನಾಮವೈಸೆ
ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬಿಡಾಡಿ ॥

3. ಘಟದೊಳಗಣ ಬಯಲು, ಮಠದೊಳಗಣ ಬಯಲು,
ಬಯಲು? ಬಯಲು ಬಯಲು?
ತಾನೆಲ್ಲಾ ಬಯಲು, ಬಿಡಾಡಿ ಬಯಲು ॥

## 9) ನೀಲಮ್ಮನ ವಚನಗಳು : 5

1. ಅಂಗದ ಸಂಗವ ಹಿಂಗಿ ಅಂಗವನಳಿದೆನಯ್ಯ.
ಆ ಅಂಗವನಳಿದ ಬಳಿಕ
ಅಣೋರಣೀಯಾನ್ ಮಹತೋ ಮಹಿಮಾನ್ ಎಂಬ
ಶಬ್ದವಡಗಿತ್ತು.
ಮನವನರಿದು,ಆ ಮನ ಘನವ ತಿಳಿದು,
ಆನು ಬದುಕಿದೆನಯ್ಯ
ಆನು ಸುಖಿಯಾದೆನಯ್ಯ.
ಆನು ಇಹಪರದ ಹಂಗಹರಿದು,
ಸುಖ ವಿಸುಖ ಪ್ರಸನ್ನರೂಪಾಯಿತ್ತಯ್ಯ ಸಂಗಯ್ಯ.

2. ಅರುಹನರಿಯಲು ಕುರುಹ ಮೇರೆಯಲೇ ಬೇಕು
ಅರುಹುನನುಗೊಳಿಸಲು
ಆನು ಪ್ರಸನ್ನಮೂರ್ತಿಯ ಪಡೆದನಯ್ಯ.
ಆನು ಉಭಯವಳಿದು ನಿರಾಭಾರಿಯಾದೆನಯ್ಯ.
ನಿರ್ಮಲ ನಿಜವ ಕಂಡು
ಮುಕ್ತಿಪದವ ಪಡೆದನಯ್ಯ ಸಂಗಯ್ಯ.

3. ಆಡಲಿಲ್ಲವಯ್ಯಾ ನಾನು ಹೆಣ್ಣುರುಪ ಧರಿಸಿ
ನುಡಿಯಲಿಲ್ಲವಯ್ಯಾ ನಾನು ಹೆಣ್ಣುರುಪ ಧರಿಸಿ
ನಾನು ಹೆಣ್ಣಲ್ಲದ ಕಾರಣ,
ನಾನು ಇಹಪರ ನಾಸ್ತಿಯಾದವಳಯ್ಯಾ.
ನಾನು ಉಭಯದ ಸಂಗವ ಕಮಡು ಕಾಣದಂತಿದ್ದೆನಯ್ಯಾ
ಸಂಗಯ್ಯಾ, ಬಸವ ಬಯಲ ಕಂಡ ಕಾರಣ.

4. ಕಾಮದ ಹಂಗಿನಲ್ಲ ಶರಣ, ಮೋಹದಇಚ್ಛೆಯವನಲ್ಲ ಶರಣ,
ಉಭಯದ ಸಂಗದವನಲ್ಲ ಶರನ, ಪ್ರಾಣದ ಕುರುಹಿಲ್ಲದ ಶರಣಂಗೆ
ಪ್ರಸಾದದ ನೆಲೆಯಿಲ್ಲವಯ್ಯ.ಎನಗೇನೂ ತಲೆದೋರದೆ ಮುಸುಕಿಟ್ಟು
ಬಸವಳಿದೆನಯ್ಯಾ ಸಂಗಯ್ಯ ನಿಮ್ಮಲ್ಲಿ.

5. ಕಾಮವನಳಿದ ಹೆನ್ಣಲ್ಲ ನಾನು, ಕಾಮ ಉಂಟೆನಗೆ.
ಕಾಯ ಸಂಸಾರವಳಿಯಿತ್ತೆಂಬ
ಕಾಮ ಸೀಮೆ ನಿಸ್ಸೀಮೆಯಳಿದು ಕಲ್ಪಿತವ ಕಂಡುಳಿದು
ಬದುಕಿದೆನಯ್ಯಾ ಸಂಗಯ್ಯ.

## 10) ಮೋಳಿಗೆ ಮಹಾದೇವಮ್ಮನ ವಚನಗಳು :

1. ಎಸುವರ ಬಲ್ಲೆ;
ಎಚ್ಚಬಾಣತಿರುಗಿ ಬಪ್ಪಂತೆ ಎಸುವರ ಕಾಣೆ
ಪೂಜಿಸುವವರ ಬಲ್ಲೆ;
ಪೂಜಿಸಿದ ಲಿಂಗ ಅಭಿಮುಖವಾಗಿ
ಸರ್ವಾಂಗದಲ್ಲಿ ವೇಧಿಸುವರ ಕಾಣೆ
ನುಡಿಗೆ ನಡೆ, ಆ ನಡೆಗಡ ನುಡಿ
ಉಭಯವ ವೇಧಿಸುವರ ಕಾಣೆ
ಈ ಉಭಯವು ಸಿದ್ಧಿಯಾಗಿ ಸಿದ್ಧಾಂತವಾದಲ್ಲಿ
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನು
ಕ್ರೀ ಜ್ಞಾನ ನಿರುತವಾದವಂಗಲ್ಲದೆ ಸಾಧ್ಯವಿಲ್ಲ

2. ಕಲ್ಲ ಭಿತ್ತಿ ನೀರನೆರೆದಲ್ಲಿ
ಪಲ್ಲವಿಸುವುದೆ ದಿಟದ ಬೀಜದ ವೃಕ್ಷದಂತೆ?
ಶ್ರದ್ಧೆ ಸನ್ಮಾರ್ಗ ಭಕ್ತಿ ಇಲ್ಲದಲ್ಲಿ
ಗುರುಭಕ್ತಿ, ಶಿವಲಿಂಗ ಪೂಜೆ, ಚರಸೇವೆ
ತ್ರಿವಿಧ ಇತ್ತವೆ ಉ:ಇಯಿತು.
ಮತ್ತೆ ನಿಜವಸ್ತುವಿನ ಸುದ್ಧಿ ನಿಮಗೆತ್ತಣದೊ?
ಎನ್ನಯ್ಯ ಪ್ರಿಯ ಇಮ್ಮಡಿ
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ವಿಶ್ವಾಸಬೇಕು.

3. ನೀರು ನೆಲನಿಲ್ಲದೆ ಇರಬಹುದೆ? ಬೀಜ ನೆಲೆಯಿಲ್ಲದೆ
ಹುಟ್ಟಬಹುದೆ?
ಜ್ಞಾನ ಕ್ರಿಯೆಯಿಲ್ಲದೆ ಅರಿಯಬಹುದೆ?
ಚಿತ್ತ ಚಿತ್ತುವಿಲ್ಲದೆ ವಸ್ತುವ ಲಕ್ಷಿಸಿ ಗ್ರಹಿಸಬುಹುದೆ?
ಇಂತೀ ಕ್ರೀಜ್ಞಾನ ಸಂಬಂಧಸ್ಥಲಭಾವ
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ
ಉಭಯ ಸ್ಥಲಭೇದ.

**ಪರಾಮರ್ಶನ ಗ್ರಂಥಗಳು:**


1. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ – ಬೆಂಗಳೂರು ವಿವಿ, ಬೆಂಗಳುರು
2. ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ – ತ.ಸು.ಶಾಮರಾಯ
3. ವೀರಶೈವ ಸಾಹಿತ್ಯ ಸಮೀಕ್ಷೆ – ಸಂ.ಸದಾನಂದ ಕನವಳ್ಳಿ
4. ಶರಣರ ಅನುಭಾವ ಸಾಹಿತ್ಯ – ಡಾ.ಹೆಚ್.ತಿಪ್ಪರುದ್ರಸ್ವಾಮಿ
5. ಬಸವೇಶ್ವರ ಮತ್ತು ಪುರಂದರ ತೌಲನಿಕ ಅಧ್ಯಯನ – ಡಾ.ಬಸವರಾಜ ಸಬರದ

6 ಅಕ್ಕಮಹಾದೇವಿ ಒಂದು ಅಧ್ಯಯನ – ಪ್ರೋ. ಶಾಂತ ಇಮ್ರಾಪೂರ

7 ಅಕ್ಕಮಹಾದೇವಿ ವಚನ ವಾಖ್ಯಾನ –ಡಾ.ವಿಜಯಕುಮಾರ ಮಹಾನುಭಾವಿಗಳು

8 ವಚನ ಧರ್ಮಸಾರ – ಎಂ.ಆರ್.ಶ್ರೀನಿವಾಸಮೂರ್ತಿ

9 ವಚನ ಅಧ್ಯಯನ – ಡಾ.ವೀರಣ್ಣ ರಾಜೂರ

10 ವಚನಗಳಲ್ಲಿ ವೈಚಾರಿಕತೆ – ಎಚ್ ತಿಪ್ಪೆರುದ್ರಸ್ವಾಮಿ

11 ವಚನ ಸಾಹಿತ್ಯ – ಎಂ. ಚಿದಾನಂದ ಮೂರ್ತಿ

12 ಬಸವಯುಗದ ವಚನ ಮಹಾಸಂಪುಟ – 1 – ಪ್ರ.ಸಂ ಎಂ.ಎಂ.ಕಲಬುರ್ಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು


----------000--------

ಬಿ.ಕಾಂ/ಬಿ.ಬಿ.ಎಂ.ನಾಲ್ಕನೆಯ ಸೆಮಿಸ್ಟರ್ ಸಾಮಾನ್ಯ ಕನ್ನಡ (ಬೇಸಿಕ್)

## ಪತ್ರಿಕೆ –4 ನಡುಗನ್ನಡ ಸಾಹಿತ್ಯ

**ಒಟ್ಟು ಅಂಕಗಳು : 100**

**ಆಂತರಿಕ ಪರೀಕ್ಷೆ : 30**

**ಸೆಮಿಸ್ಟರ್ ಅಂತ್ಯ ಪರೀಕ್ಷೆ: 70**

**ಬೋಧನೆ: 04 ಗಂಟೆಗಳು/ವಾರಕ್ಕೆ**

**ಘಟಕಗಳು : 04**

ಅ) **ಹರಿಶ್ಚಂದ್ರಕಾವ್ಯ ಸಂಗ್ರಹ–** (ಸಂ): ಟಿ.ಎಸ್.ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರೀ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

### ಅಧ್ಯಯನಕ್ಕೆ ಆಯ್ಕೆ ಮಾಡಿದ ಕಾವ್ಯಾಭಾಗ :–

1 ಕಥಾರಂಭ

2 ವಸಿಷ್ಟ ವಿಶ್ವಾಮಿತ್ರ ವಿವಾದ 122 ಪದ್ಯಗಳು

3 ಮೃಗಾಯ ಪ್ರಸಂಗ

4ವಿಶ್ವಾಮಿತ್ರಾಶ್ರಮ ಪ್ರವೇಶ

ಆ) **ಸರ್ವಜ್ಞನ ವಚನಗಳು** – (ಸಂ) ಡಾ.ಎಲ್. ಬಸವರಾಜು

### ಅಧ್ಯಯನಕ್ಕೆ ಆಯ್ಕೆ ಮಾಡಿದ ತ್ರಿಪದಿ ಭಾಗಗಳು :

ಜಾತಿಸ್ಮರಣ ಪದ್ಧತಿ ಗುರುಕರುಣ ಪದ್ಧತಿ, ಇಷ್ಟಲಿಂಗ– ಷಟ್ಸ್ಥಲ ಪದ್ಧತಿ, ಜ್ಞಾನ ಪದ್ಧತಿ, ದಾನಪದ್ಧತಿ, ದಾನವಿದೂ ಪದ್ಧತಿ, ರಾಜನೀತಿ ಪದ್ಧತಿ, ನೀತಿ ನಿರ್ಣಯ ಪದ್ಧತಿ

**ಪರಾಮರ್ಶನ ಗ್ರಂಥಗಳು:**


1. ವೀರಶೈವ ಸಾಹಿತ್ಯ ಸಮೀಕ್ಷೆ – ಸಂ.ಸದಾನಂದ ಕನವಳ್ಳಿ
2. ಷಟ್ಪದಿ ಸಾಹಿತ್ಯ – ಕೆ. ಮರುಳಸಿದ್ದಪ್ಪ
3. ಸಾಂಗತ್ಯ ಕವಿಗಳು – ಹಂಪ ನಾಗರಾಜಯ್ಯ
4. ಕನ್ನಡ ಸಾಹಿತ್ಯ ಸಂಗಾತಿ – ಕೀರ್ತಿನಾಥ ಕುರ್ತಕೋಟಿ
5. ವಚನಗಳಲ್ಲಿ ವೈಚಾರಿಕತೆ – ಎಚ್ ತಿಪ್ಪೆರುದ್ರಸ್ವಾಮಿ
6. ವಚನ ಸಾಹಿತ್ಯ – ಎಂ. ಚಿದಾನಂದ ಮೂರ್ತಿ
7. ತ್ರಿಪದಿ, ರಗಳೆ, ಜನಪದ ಸಾಹಿತ್ಯ – ಕಾಳೇಗೌಡ ನಾಗವಾರ
8. ಸರ್ವಜ್ಞನ ತ್ರಿಪದಿಗಳು – ಸಂ–ಅಮರೇಶ ನುಡುಗದೋಣಿ ಕನ್ನಡ ವಿ.ವಿ. ಹಂಪಿ


---------000----------

ಬಿ.ಎಸ್‌ಸಿ/ಬಿ.ಸಿ.ಎ ಬಯೋಟೆಕ್ನಾಲಜಿ/ಬಿಎಸ್ಸಿ ವಸ್ತ್ರ ವಿನ್ಯಾಸ ತಂತ್ರಜ್ಞಾನ ಬಿ.ಹೆಚ್.ಎಮ್. ನಾಲ್ಕನೆಯ ಸೆಮಿಸ್ಟರ್ ಸಾಮಾನ್ಯ ಕನ್ನಡ(ಬೇಸಿಕ್)

## ಪತ್ರಿಕೆ –4 ನಡುಗನ್ನಡ ಮತ್ತು ಜನಪದ ಸಾಹಿತ್ಯ

**ಒಟ್ಟು ಅಂಕಗಳು : 100**
**ಆಂತರಿಕ ಪರೀಕ್ಷೆ : 30**
**ಸೆಮಿಸ್ಟರ್ ಅಂತ್ಯ ಪರೀಕ್ಷೆ: 70**
**ಬೋಧನೆ: 04 ಗಂಟೆಗಳು/ವಾರಕ್ಕೆ**
**ಘಟಕಗಳು : 04**

ಅ)**ಯಶೋಧರ ಚರಿತೆ** – (ಸಂ):ತೇಕ್ಕುಂದ ಗೋಪಾಲಕೃಷ್ಣಭಟ್ಟ ,

ಪ್ರಕಾಶನ: ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ಆ)**ಗರತಿಯ ಹಾಡುಗಳು –** (ಸಂ): ಹಲಸಂಗಿ ಗೆಳೆಯರು

ಅಧ್ಯಯನಕ್ಕೆ ಆಯ್ಕೆ ಮಾಡಿದ ಭಾಗಗಳು:

1. ತವರು ಮನೆ ಮತ್ತು ತಾಯಿ ತಾಯ್ತಂದೆ
2. ಗೆಳತಿ
3. ಸತಿಪತಿ
4. ಹಾಸ್ಯ

**ಪರಾಮರ್ಶನ ಗ್ರಂಥಗಳು:**


1. ಕನ್ನಡ ಕವಿ ಚರಿತೆ ಸಂಪುಟಗಳು 1,2,3 – ಆರ್.ನರಸಿಂಹಚಾರ್
2. ಚಂಪೂ ಕವಿಗಳು –
3. ಜಾನಪದ ಸ್ವರೂಪ – ಹಾಮಾನಾ
4. ಜಾನಪದ ಸಾಹಿತ್ಯ ರೂಪಗಳು – ರಾಗೌ
5. ಜಾನಪದ ಅಧ್ಯಯನ – ದೇ.ಜವರೇಗೌಡ
6. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ –ಬೆಂಗಳೂರು ವಿವಿ, ಬೆಂಗಳುರು


------------000------------

ಬಿ.ಎ.ನಾಲ್ಕನೆಯ ಸೆಮಿಸ್ಟರ್ ಕನ್ನಡ (ಐಚ್ಚಿಕ)

## ಪತ್ರಿಕೆ 4 –ಕಾವ್ಯ ಮೀಮಾಂಸೆ

**ಒಟ್ಟು ಅಂಕಗಳು : 100**
**ಆಂತರಿಕ ಪರೀಕ್ಷೆ : 30**
**ಸೆಮಿಸ್ಟರ್ ಅಂತ್ಯ ಪರೀಕ್ಷೆ: 70**
**ಬೋಧನೆ: 04 ಗಂಟೆಗಳು/ವಾರಕ್ಕೆ**
**ಘಟಕಗಳು : 04**

**ಅ) ಭಾರತೀಯ ಕಾವ್ಯ ಮೀಮಾಂಸೆ–ತೀ.ನಂ.ಶ್ರೀ.**

1) ಭಾರತೀಯ ಕಾವ್ಯ ಮೀಮಾಂಸೆಯ ಉಗಮ ಮತ್ತು ವಿಕಾಸ–ಪ್ರಮುಖ ಭಾರತೀಯ ಅಲಂಕಾರಿಕರ ಪರಿಚಯ–ಪ್ರಾಚೀನ ಮತ್ತು ನವೀನ ಅಲಂಕಾರಿಕರು.
2) ಕಾವ್ಯ ಸ್ವರೂಪ, ಲಕ್ಷಣ ಮತ್ತು ಕಾವ್ಯ ಪ್ರಯೋಜನಗಳು, ಕವಿ ಮತ್ತು ಸಹೃದಯ–ಕಾವ್ಯದ ಆಕರ(ಪ್ರತಿಭೆ) ಮತ್ತು ಕಾವ್ಯದ ಪರಿಕರಗಳು(ವ್ಯುತ್ಪತ್ತಿ)
3) ಅಲಂಕಾರಗಳು:ಶಬ್ದಾಲಂಕಾರಗಳು–ಅನುಪ್ರಾಸ ಮತ್ತು ಯಮಕ; ಅರ್ಥಾಲಂಕಾರಗಳು–ಉಪಮೆ,ರೂಪಕ,ದೀಪಕ,ಉತ್ಪ್ರೇಕ್ಷೆ,ಅರ್ಥಾಂತರನ್ಯಾಸ.
4) ರಸ ಪ್ರಸ್ಥಾನ: ಭರತನರಸಸೂತ್ರದ ವಿವರಣೆ–ಭಟ್ಟಲೊಲ್ಲಟ; ಶ್ರೀಶಂಕುಕ;ಭಟ್ಟನಾಯಕ; ಅಭಿನವಗುಪ್ತರ ರಸವಾದಗಳು; ರಸ ಪ್ರಭೇದಗಳು.

**ಬ) ಪಾಶ್ಚಾತ್ಯ ಕಾವ್ಯಮೀಮಾಂಸೆ**

ಪಾಶ್ಚಾತ್ಯ ಕಾವ್ಯ ಚಿಂತನೆಯ ಪ್ರಮುಖ ಪರಿಕಲ್ಪನೆಗಳು

1) ಪ್ಲೇಟೋ–ಅನುಕರಣ ಸಿದ್ಧಾಂತ
2) ಅರಿಸ್ಟಾಟಲ್– ಕೆಥಾರ್ಸಿಸ್ ದುರಂತ ನಾಟಕ
3)ವರ್ಡ್ಸ್‌ವರ್ತ್ ಮತ್ತು ಕೋಲ್‌ರಿಜ್ – ಸಾಹಿತ್ಯದ ವಸ್ತುಭಾಷೆ
4)ಎಡ್ವರ್ಡ್ ಬುಲ್ಲೋ – ಸಾಧಾರಣೀಕರಣ/ಮಾನಸಿಕ ದೂರ

**ಪರಾಮರ್ಶನ ಗ್ರಂಥಗಳು:**


1. ಭಾರತೀಯ ಕಾವ್ಯಮೀಮಾಂಸೆ – ತಿ.ನ.ಶ್ರೀ.
2. ಶತಮಾನದ ಸಾಹಿತ್ಯ ವಿಮರ್ಶೆ – ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
3. ವಿಮರ್ಶೆಯ ಪೂರ್ವ– ಪಶ್ಚಿಮ –ಡಾ.ಜಿಎಸ್.ಶಿವರುದ್ರಪ್ಪ
4. ಕಾವ್ಯಾರ್ಥ ಚಿಂತನ – ಡಾ.ಜಿ.ಎಸ್.ಶಿವರುದ್ರಪ್ಪ
5. ಕನ್ನಡ ಕಾವ್ಯ ಮೀಮಾಂಸೆ – ಡಾ.ವೀರಣ್ಣ ದಂಡೆ
6. ಪಾಶ್ಚಾತ್ಯ ಕಾವ್ಯ ಮೀಮಾಂಸೆ – ಪ್ರೊ. ವಿ.ಎಂ.ಇನಾಮದಾರ
7. ತೌಲನಿಕ ಕಾವ್ಯ ಮೀಮಾಂಸೆ – ಡಾ. ಹೆಚ್.ತಿಪ್ಪೇರುದ್ರಸ್ವಾಮಿ
8. ಪಾಶ್ಚಾತ್ಯ ಕಾವ್ಯ ಚಿಂತನ – ಪ್ರೊ. ಸಿ.ಪಿ.ಕೆ
9. ಸೌಂದರ್ಯ ಮೀಮಾಂಸೆ – ಡಾ.ಜಿ.ಎಸ್.ಶಿವರುದ್ರಪ್ಪ
10. ಪಾಶ್ಚಾತ್ಯ ಕಾವ್ಯ ಮೀಮಾಂಸೆ: ಒಳನೋಟಗಳು – ಡಾ.ಎಸ್.ಎಂ.ಹಿರೇಮಠ

**ಬಿ.ಎ./ಬಿ.ಕಾಂ/ಬಿಎಸ್ಸಿ/ ಬಿ.ಬಿ.ಎಂ/ ಬಿಎಸ್.ಡಬ್ಲ್ಯೂ/ ಬಿ.ಹೆಚ್.ಎಮ್/ಬಿ.ಸಿ.ಎ/ಬಿ.ಎಸ್ಸಿ (ಫ್ಯಾಷನ್‌ಟೆಕ್ನಾಲಜಿ)**

**ನಾಲ್ಕನೆಯ ಸೆಮಿಸ್ಟರ್**

**ಕನ್ನಡ(ಸಿ.ಬಿ.ಸಿ.ಎಸ್) ಮುಕ್ತ ಆಯ್ಕೆ ಪತ್ರಿಕೆ**

**ಪತ್ರಿಕೆ 103: ಕನ್ನಡ ಕಾವ್ಯ ಪರಂಪರೆ(ಪ್ರಾಚೀನ ಮತ್ತು ಮಧ್ಯಕಾಲೀನ)**

**ಒಟ್ಟು ಅಂಕಗಳು : 100**

**ಆಂತರಿಕ ಪರೀಕ್ಷೆ : 30**

**ಸೆಮಿಸ್ಟರ್ ಅಂತ್ಯ ಪರೀಕ್ಷೆ: 70**

**ಭೋದನೆ: 04 ಗಂಟೆಗಳು/ವಾರಕ್ಕೆ**

**ಘಟಕಗಳು : 04**

**1) ಕವಿರಾಜಮಾರ್ಗದಲ್ಲಿನ ನಾಡು–ನುಡಿ–ನಾಡವರು**

ಕವಿರಾಜ ಮಾರ್ಗಂ(ಸಂ ಎಂ ವಿ ಸೀ ) ಕ ಸಾ ಪ ಬೆಂಗಳೂರು

ಪರಿಚ್ಛೇಧ– 1ರಲ್ಲಿ ಪದ್ಯ ಸಂಖ್ಯೆ–36ಕಾವೇರಿಯಿದಮಾ

37 ಅದರೋಳಗಂ.....

38 ಪದನರಿದು....

39 ಕುರಿತವರಲ್ಲದೆ

40–ಜಾರ್ಣಕರಲ್ಲಿದವರುಂ.....

46 ದೋಷಮಿನಿತೆಂದು......

ಪರಿಚ್ಛೇದ 2 ರಲ್ಲಿ ಶುಭಟರ್ಕಳ್..... ಒಟ್ಟು 7 ಪದ್ಯಗಳು

**2) ಪಂಪನ ಬನವಾಸಿ ವರ್ಣನೆ ಕುರಿತ ಪದ್ಯಗಳು**

ಪಂಪನ ಬನವಾಸಿ ವರ್ಣನೆ...... ಪಂಪ ಭಾರತಂ ಮೈ ವಿ ವಿ 1973

4ನೇಆಶ್ವಾಸ ಪದ್ಯ:– 28–ಸೋಗಯಿಸಿ ಬಂದ ಮಾಮರನೆ.....

29– ಚಾಗದ ಭೋಗದಕ್ಕರದ ಗೇಯದ......

30– ತೆಂಕಣ ಗಾಳಿ ಸೋಂಕಿದೋಡಂ......

**3) ವಚನಗಳು:**

**ಬಸವಣ್ಣನವರ ವಚನಗಳು:**

1. ಮನೆಯೊಳಗೆ ಮನೆಯೊಡಯನಿದ್ದನೊ, ಇಲ್ಲವೊ !
   ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿ,
   ಮನೆಯೊಳಗೆ ಮನೆಯೊಡಯನಿದ್ದನೊ, ಇಲ್ಲವೊ !
   ತನುವಿನಲ್ಲಿ ಹುಸಿ ತುಂಬಿ ಮನದೊಳಗೆ ವಿಷಯ ತುಂಬಿ
   ಮನದೊಳಗೆ [ ಮನದೊ] ಡೆಯನಿದ್ದಾನೊ, ಇಲ್ಲವೊ !
   ಇಲ್ಲ, ಕೂಡಲಸಂಗಮದೇವಾ

2. ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು,
   ಪುರುಷನ ಒಲವಿಲ್ಲದ ಲಲನೆಯಂತೆ ಆನಿದ್ದೇನಯ್ಯಾ.
   ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ,
   ಶಿವ ನಿಮ್ಮ ಒಲವಿಲ್ಲದಂತೆ ಆನಿದ್ದೇನಯ್ಯಾ.
   ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ,
   ನೀನೊಲಿದಂತೆ ಸಲಹಯ್ಯಾ, ಕೂಡಲಸಂಗಮದೇವಾ

**ಅಲ್ಲಮ ಪ್ರಭುವಿನ ವಚನಗಳು :**

1. ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ
   ಆಗಲಿ ಮಹಾಪ್ರಸಾದವೆಂದೆನಯ್ಯಾ.
   ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ
   ಆಗಲಿ ಮಹಾಪ್ರಸಾದವೆಂದೆನಯ್ಯಾ.
   ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದಡೆ
   ಆಗಲಿ ಮಹಾಪ್ರಸಾದವೆಂದೆನಯ್ಯಾ.
   ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ
   ಆಗಲಿ ಮಹಾಪ್ರಸಾದವೆಂದೆನಯ್ಯಾ.
   ಗುಹೇಶ್ವರಾ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು

2. ಅಕ್ಷರವ ಬಲ್ಲೆವೆಂದು ಅಹಂಕಾರವೆಡೆಗೊಂಡು, ಲೆಕ್ಕಗೊಳ್ಳರಯ್ಯಾ.
   ಗುರು ಹಿರಿಯರು ತೋರಿದ ಉಪದೇಶದಿಂದ;
   ವಾಗದ್ವೈತವನೆ ಕಲಿತು ವಾದಿಪರಲ್ಲದೆ, ಆಗು–ಹೋಗೆಂಬುದನರಿಯರು.
   ಭಕ್ತಿಯನರಿಯರು ಮುಕ್ತಿಯನರಿಯರು,
   ಮತ್ತೂ ವಾದವಕೆಳಸುವರು.
   ಹೋದರು,ಗುಹೇಶ್ವರ ಸಲೆ ಕೊಡಮಾರಿಗೆ.

**ಅಕ್ಕಮಹಾದೇವಿಯ ವಚನಗಳು :**

1. ಅಕ್ಕ ಕೇಳಕ್ಕಾ,ನಾನೋಂದು ಕನಸ ಕಂಡೆ.
   ಚಿಕ್ಕ ಚಿಕ್ಕ ಕೆಂಜೆಡೆಗಳ ಸುಲಿಪಲ್ಲ ಗೊರವನು
   ಬಂದೆನ್ನ ನೆರೆದ ನೋಡವ್ವಾ
   ಆತನನಪ್ಪಿಕೊಂಡು ತಳವೆಳಗಾದೆನು.
   ಚೆನ್ನಮಲ್ಲಿಕಾರ್ಜುನನ ಕಂಡು ಕಣ್ಣಮುಚ್ಚಿ ತೆರೆದು
   ತಳವೆಳಗಾದೆನು.

2. ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು,
   ದೇವಾಂಗವನುಟ್ಟೆನೆಲೆ ಪುರುಷ ಬಾರ,
   ಪುರುಷ ರತ್ನವೆ ಬಾರ.
   ನಿನ್ನ ಬರವೆನ್ನ ಅಸುವಿನ ಬರವಾದುದೀಗ,
   ಬಾರಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ,
   ನೀನು ಬಂದಹನೆಂದು ಬಟ್ಟೆಯನೋಡಿ
   ಬಾಯಾರುತಿರ್ದೆನು.

## 4) ತತ್ವಪದಗಳು:

**ಶಿಶುನಾಳ ಶರೀಫ–** 1) ಸೋರುತಿಹುದು ಮನೆಯ ಮಾಳಿಗೆ

2) ಬಿದ್ದಿಯೆ ಎದ್ದೆಯಾ ಮುದುಕಿ

**ಕಡಕೋಳ ಮಡಿವಾಳಪ್ಪ –** 1) ಬಾರಪ್ಪ ಮಳೆರಾಯ ಬೇಗನೆ
ಬೇಗನೆ ಮುಖತೋರಪ್ಪ ಮಳೆರಾಯ

2) ಬಾಯಿಲೊಂದು ಆಡ್ತೀರಿ
ಮನಸಿನಳಗೊಂದು ಮಾಡ್ತೀರಿ

## 5) ಜನಪದ ತ್ರಿಪದಿಗಳು:

1. ಆಡಿ ಬಾ ನನ ಕಂದ ಅಂಗಾಲ ತೋಳದೇನ
ತೆಂಗಿನಕಾಯಿ ತಿಳಿನೀರ । ತಕ್ಕೊಂಡು
ಬಂಗಾರ ಪಾದ ತೊಳೆದೇನ

2.ನನ್ನಯ್ಯನಂಥೋರು ಹನ್ನೆರಡು ಮಕ್ಕಳು
ಹೊನ್ನೇಯ ಮರದ ನೆರಳೇಲಿ । ಹಾಡುವಾಗ
ಸನ್ಯಾಸಿ ಜಪವ ಮಾರೇತಾನು

3.ಕಂದನ ಕಿರಿಕಿರಿ ಇಂದೆನ ಹೇಳಲಿ
ಬಿಂದಿಗೆ ಹಾಲು ಸುರುವಂದ ।ಥೇಂಜಿಂಯಾ
ಚಂದ್ರಮಾನ ತಂದು ನಿಲಿಸೆಂದ

4.ಏಳುತಲಿ ಏದ್ದು ಯಾರ‍್ಯಾರ ನೆನೆದೆವು ?
ಎಳ್ಳು ಜೀರಿಗೆ ಬೇಳೆಯೋಳ । ಭೂಮಿತಾಯ
ನಾವೆಲ್ಲಕೆ ಮೊದಲು ನೆನೆದೆವೆ

5.ರಾಗಿ ಬಣ್ಣದ ಕುದುರೆ ರಾಜೆಕ ದೊಡ್ಡದು
ರಾಜರೋಳು ರಾಜ ಮಾಹಾರಾಜ । ಬರುವಾಗ
ರಾಜೇವ ಕೈಯ್ಯ ಮುಗಿದಾವ

6.ಕಸವ ಹೊಡೆದ ಕೈಯು ಕಸ್ತೂರಿ ನಾತಾವ
ಬಸವಣ್ಣ ನಿನ್ನ ಸೆಗಣಿಯ । ಬಳಿದಾ ಕೈ
ಎಸಳ ಯಾಲಕ್ಕಿ ಗೊನಿನಾತ

7.ಊರಿಗೆ ಮಳೆ ಹೊದು ಏರು ಕಟ್ಟೋ ಕಂದಯ್ಯ
ಊರ ಮುಂದಿನ ಬಸವಣ್ಣೆ । ಕೈ ಮುಗಿದು
ಏರು ಕಟ್ಟೋ ಮುದ್ದು ಮುಖದವನೆ

8.ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗೀಯ
ಜಲ್ಲ ಜಲ್ಲಾನೆ ಉದುರಮ್ಮ । ನಮ್ಮನೆ
ಬೆಲ್ಲದಾರತಿಯ ಬೆಳಗೇವು

9.ಎಳು ಎಲ್ಲವ್ವ ತಾಯಿ ಎಷ್ಟೋತ್ತು ಮಲಗಿದೇ
ಹೂವೇಂಜಲಾಗಿ ಹುಳ ಮುಟ್ಟಿ । ಕೊಳ್ಳದ
ನೀರೆಂಜುಲಾಗಿ ಗಿಳಿ ಕುಡಿದು

10.ಹಾಲುಂಡ ತವರಿಗೆ ಏನೆಂದು ಹಾಡಲೇ ?
ಹೊಳೆದಂಡೆಲಿರುವ ಕರಕಿಯ । ಕುಡಿಯಂಗ
ಹಬ್ಬಲಿ ಅವರ ರಸಬಳ್ಳಿ

11.ಹೆಣ್ಣಿನ ಜನುಮಕ ಅಣ್ಣ ತಮ್ಮರು ಬೇಕ
ಬೆನ್ನಕಟ್ಟುವರು ಸಭೆಯೊಳಗ । ಸಾವಿರ
ಹೊನ್ನ ಕಟ್ಟುವರು ಉಡಿಯೊಳಗ

12. ಸುವಂತ ಕುಟ್ಯಾರೆ ಸೂಬತ್ತ ಜಾಣೆರು
ಸುವ್ವಾಬಾ ಸುವ್ವಿ ಸುವ್ವಾ ಬಾ
ನಿಂತ ಒನಕಿಗೆ ಗಂಧ ಧೂಪವ ತೋರಿ

13. ಆಡಿ ಕುಟ್ಟಿದರೆ ದಣೆರೆಂದೂ
ಆಡಿ ಕುಟ್ಟಿದರೆ ದಣಿರೆಂದೊನಕೆಯ
ಕೆತ್ತಿದ ಬಗಡಿ ಸುಖಿ ಬಾಳೊ